3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**S.C.No. 146/2022**

ಪ್ರಾಸಾ 17

ಚಾಸಾ 23

| | |
|---|---|
| ಹೆಸರು | ಕೃಷ್ಣಪ್ಪ |
| ತಂದೆಯ ಹೆಸರು | ಮಲ್ಲಣ್ಣ |
| ವಯಸ್ಸು | 55 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಗಾಂಧಿನಗರ |

ಸಾಕ್ಷಿಯನ್ನು ದಿನಾಂಕ 28.06.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ ಮತ್ತು ವಿಸಿ ಮೂಲಕ ಹಾಜರಿರುವ 1 ನೇ ಆರೋಪಿಯನ್ನು ಗುರುತಿಸುತ್ತೇನೆ. ಅವರನ್ನು ಕೆಲಸಕ್ಕೆ ಹೋಗುತ್ತಿದ್ದಾಗ ನೋಡಿರುತ್ತೇನೆ. ನನ್ನ ಬಾಬ್ತು ಒಂದು ಜೆಸಿಬಿ ವಾಹನ ಇರುತ್ತದೆ. ಸುಮಾರು ಎರಡೂವರೆ ವರ್ಷಗಳ ಹಿಂದೆ 1 ನೇ ಆರೋಪಿಯ ಜಮೀನಿಗೆ ಮಣ್ಣನ್ನು ಹೊಡೆಯಲು ಜೆಸಿಬಿ ವಾಹನವನ್ನು ತೆಗೆದುಕೊಂಡು ಹೋಗಿದ್ದೆ. 1 ನೇ ಆರೋಪಿ ಸುಮಾರು 3 ದಿನಗಳಿಂದ ನನ್ನನ್ನು ಮಣ್ಣನ್ನು ಹೊಡೆಯಲು ಬರುವಂತೆ ಕೇಳಿಕೊಳ್ಳುತ್ತಿದ್ದುದ್ದರಿಂದ ನಾನು ಹೋಗಿದ್ದೆ. 1 ನೇ ಆರೋಪಿ ತನಗೆ ಮಂಜೂರಾಗಿದ್ದ ಮನೆಯನ್ನು ಕಟ್ಟಿಸಲು ಮಣ್ಣನ್ನು ಹೊಡೆಯಬೇಕೆಂದು ಹೇಳಿದ್ದರು. ಆದ್ದರಿಂದ ಮಣ್ಣನ್ನು ಹೊಡೆಯಲು ಹೋಗಿದ್ದೆ. ಸುಮಾರು 20 ರಿಂದ 25 ಟ್ರಾಕ್ಟರ್ ಮಣ್ಣನ್ನು ಅವರ

ಜಮೀನಿನಿಂದ ಮನೆಗೆ ಹೊಡೆದಿರುತ್ತೇನೆ. ಮಣ್ಣನ್ನು ಹೊಡೆದ ನಂತರ ನಾನು ಸಂಜೆ ವಾಪಸ್ ಬಂದಿರುತ್ತೇನೆ.

2) ಸುಮಾರು ಐದಾರು ದಿನಗಳ ನಂತರ ಸಿರಾ ಪೊಲೀಸರು ನನಗೆ ಕರೆ ಮಾಡಿ ಯಾರನ್ನೋ ಕೊಲೆ ಮಾಡಿ 1 ನೇ ಆರೋಪಿಯು ಪಾಯದಲ್ಲಿ ಹಾಕಿರುತ್ತಾರೆಂದು ತಿಳಿಸಿರುತ್ತಾರೆ. ಮೇಲೆ ಹೇಳಿದ ವಿಚಾರಗಳನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಾಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

3) 2 ನೇ ಆರೋಪಿ ನನಗೆ ಕರೆ ಮಾಡಿ ನಮ್ಮ ಮನೆಯ ಪಾಯಕ್ಕೆ ಮಣ್ಣು ಹೊಡೆಯಬೇಕು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಅಳಿಯನಿಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಆಗ ನಾನು ಸದ್ಯಕ್ಕೆ ಆಗುವುದಿಲ್ಲ , ಬೇರೆ ಕೆಲಸ ಇರುತ್ತದೆ ಎಂದು ಹೇಳಿದ್ದೆ ಎಂದರೆ ಸರಿ. ಆಗ 2 ನೇ ಆರೋಪಿಯು ಒಂದು ಲೋಡಿಗೆ ಹೆಚ್ಚುವರಿಯಾಗಿ ರೂ.50 ಹಣ ಕೊಡುತ್ತೇವೆ, ಬೇಗ ಮಣ್ಣು ಹೊಡೆಯಿರಿ ಎಂದು ನನಗೆ ತಿಳಿಸಿದ್ದರು ಎಂದರೆ ಸರಿ. ಅವರ ಕರೆ ಮಾಡಿದ 2 ದಿನಗಳ ನಂತರ ನಾನು ಜೆಸಿಬಿ ಯನ್ನು ತೆಗೆದುಕೊಂಡು ಹೋಗಿ 1 ನೇ ಆರೋಪಿಯ ಜಮೀನಿನ ಹತ್ತಿರ ಹೋಗಿ

ಮಣ್ಣನ್ನು ಹೊಡೆದು ಬಂದಿದ್ದೆ ಎಂದರೆ ಸರಿ. ನಾನು ಮಣ್ಣನ್ನು ಹೊಡೆಯುವಾಗ 1 ನೇ ಆರೋಪಿಯು ಅಲ್ಲಿ ನಿಂತಿದ್ದ ಎಂದರೆ ಸರಿ. ಕಾಂತರಾಜುರವರು ಟ್ರಾಕ್ಟರ್ ನ್ನು ತಂದಿದ್ದರು ಎಂದರೆ ಸರಿ. ಆ ಟ್ರಾಕ್ಟರ್ ನಲ್ಲಿ ಮಣ್ಣನ್ನು ತುಂಬಿಸಿ ಪಾಯಕ್ಕೆ ಹಾಕುತ್ತಿದ್ದರು ಎಂದರೆ ಸರಿ. ಅದು ಕಮಲಾನಾಯಕ ತಾಂಡ್ಯದಲ್ಲಿರುವ ಮನೆಯ ಪಾಯ ಎಂದರೆ ಸರಿ. ದಿಃ 02.04.2022 ರಂದು ಯುಗಾದಿ ಹಬ್ಬದ ದಿನ ರಾತ್ರಿ 10 ಗಂಟೆಗೆ ಕಮಲಾನಾಯಕ ತಾಂಡ್ಯದಲ್ಲಿ ರವಿಚಂದ್ರನಾಯಕರವರನ್ನು 1 ಮತ್ತು 2 ನೇ ಆರೋಪಿತರು ಇಬ್ಬರೂ ಸೇರಿಕೊಂಡು ಕೊಲೆ ಮಾಡಿ ಶವವನ್ನು ಯಾರಿಗೂ ಗೊತ್ತಾಗದಂತೆ 1 ನೇ ಆರೋಪಿರವರ ಮನೆಯ ಪಾಯದಲ್ಲಿ ಗುಂಡಿ ತೋಡಿ ಹೂತಿಟ್ಟಿರುತ್ತಾರೆಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ನಾವು ಮಣ್ಣನ್ನು ಹೊಡೆಯಲು ಹೋದಾಗ ಸದರಿ ವಿಚಾರಗಳು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಮಣ್ಣನುನ ಹೊಡೆಯಲು 2 ನೇಆರೋಪಿ ಹೇಳಿದದರಿಂದನಾನು ಮಣ್ಣನ್ನುಹೊಡೆದು ಬಂದಿರುತ್ತೇನೆ ಎಂದರೆ ಸರಿ. 1 ನೇ ಆರೋಪಿಯ ಜಮೀನಿನಿಂದಲೇ ಮಣ್ಣನ್ನು ತೆಗೆದಿರುತ್ತೇವೆ ಎಂದರೆ ಸರಿ. ಅದನ್ನು ತೆಗೆದುಕೊಂಡು ಹೋಗಿ ಪಾಯಕ್ಕೆ ಹಾಕಿರುತ್ತೇವೆ ಎಂದರೆ ಸರಿ.

4) 1 ಮತ್ತು 2 ನೇ ಆರೋಪಿಗೆ ಅನೈತಿಕ ಸಂಬಂಧವಿದ್ದು ಅದು 2 ನೇ ಆರೋಪಿಯ ಗಂಡ ಮೃತ ರವಿಚಂದ್ರನಾಯಕನಿಗೆ ತಿಳಿದಿದ್ದು ಇದಕ್ಕೆ ಅವರು ವಿರೋಧಿಸುತ್ತಾರೆಂದು ಇಬ್ಬರೂ ಸಂಚು ಹೂಡಿ ಮೃತ ರವಿಚಂದ್ರನಾಯಕನನ್ನು ಮನೆಯಲ್ಲಿಯೇ ಕೊಲೆ ಮಾಡಿ ಪಾಯದಲ್ಲಿ ಹೂತು ಹಾಕಿರುತ್ತಾರೆಂಬ ವಿಚಾರ ನನಗೆ ಪೊಲೀಸರಿಂದ ತಿಳಿದಿರುತ್ತದೆ ಎಂದರೆ ಸರಿ. ಈ ಪ್ರಕಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ.N.R.K. ವಕೀಲರಿಂದ :**

5) ಮಣ್ಣನ್ನು ಹೊಡೆಯಲು ಹೋಗುವುದಕ್ಕಿಂತ ಮುಂಚೆ ಕಮಲಾನಾಯಕನತಾಂಡ್ಯಕ್ಕೆ ನಾನು ಹೋಗಿರುವುದಿಲ್ಲ. ಸದರಿ ಗ್ರಾಮದಲ್ಲಿ ಎಷ್ಟು ಮನೆಗಳು ಇರುತ್ತವೆಂದು

ಗೊತ್ತಿಲ್ಲ. 1 ನೇ ಆರೋಪಿಯು ಜಮೀನನ್ನು ತೋರಿಸಿ, ಇದು ನಮ್ಮದೇ ಜಮೀನು ಅಲ್ಲಿಂದಲೇ ಮಣ್ಣನ್ನು ಹೊಡೆಯಿರಿ ಎಂದು ತೋರಿಸಿರುತ್ತಾರೆ. 1 ನೇ ಆರೋಪಿಯು ಯಾವುದೇ ಜಮೀನನ್ನು ನನಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮಣ್ಣು ಹೊಡೆದಿರುವುದಿಲ್ಲ, ಆ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಣ್ಣನ್ನು ಹೊಡೆಯಲು 1 ನೇ ಆರೋಪಿಯ ಜಮೀನಿಗೆ ಹೋಗಿರುವುದಿಲ್ಲ , ನನ್ನ ಅಳಿಯ ಮಣ್ಣನ್ನು ಹೊಡೆಯಲು ಟ್ರಾಕ್ಟರ್ ನ್ನು ತಂದಿರಲಿಲ್ಲ , ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ಮಂಜೂರು ಆಗಿರುತ್ತದೆ ಎಂದು 1 ನೇ ಆರೋಪಿ ನನಗೆ ತಿಳಿಸಿರುತ್ತಾರೆಂದು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ.M.S.U. ವಕೀಲರಿಂದ :</u>**

6) ಜೆಸಿಬಿ ಯ ಮಾಲೀಕ ನಾನೇ. ಆರ್.ಸಿ. ನನ್ನ ಹೆಸರಿಗೆ ಆಗಿರುವುದಿಲ್ಲ. ನನ್ನ ಅಳಿಯನ ಹೆಸರು ಕಾಂತರಾಜು. ಜೆಸಿಬಿ ಯನ್ನು ಬಾಡಿಗೆಗೆ ಯಾರ್ಯಾರು ಕರೆಯುತ್ತಾರೋ ಅವರೆಲ್ಲರ ಹೆಸರುಗಳನ್ನು ಹೇಳಲು ಆಗುವುದಿಲ್ಲ ಎಂದರೆ ಸರಿ. ನನಗೆ ಟ್ರಾಕ್ಟರ್ ಮತ್ತು ಜೆಸಿಬಿ ಇರುವುದಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ಮತ್ತು ಜೆಸಿಬಿ ನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನನ್ನ ಅಳಿಯನಿಗೆ ಕರೆ ಮಾಡಿದ್ದು ಯಾರು ಕರೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. 2 ನೇ ಆರೋಪಿ ನನಗಾಗಲೀ , ನನ್ನ ಅಳಿಯನಿಗಾಗಲೀ ಕರೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಅಳಿಯನಿಗೆ ಮಾಡಿರುತ್ತಾರೆಂದು ನುಡಿಯುತ್ತಾರೆ. ರೂ.50 ಹೆಚ್ಚಿನ ಹಣ ಕೊಡುತ್ತೇನೆಂದು ನನ್ನ ಅಳಿಯನಿಗೆ ಹೇಳಿರುತ್ತಾರೆ. ಸದರಿ ಮಾತನ್ನು ನನ್ನ ಅಳಿಯನಿಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸುಮಾರು 20 ರಿಂದ 25 ಲೋಡ್ ಟ್ರಾಕ್ಟರ್ ಮಣ್ಣನ್ನು ಹೊಡೆದಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜೆಸಿಬಿ ವಾಹನ ಚಾಲನೆ ಮಾಡಲು ನನಗೆ ಪರವಾನಗಿ ಇರುವುದಿಲ್ಲ. ಟ್ರಾಕ್ಟರ್ ಚಾಲನೆ ಮಾಡಲು ನನಗೆ

ಪರವಾನಗಿ ಇರುತ್ತದೆ. ಅದನ್ನು ಪೊಲಿಸರಿಗೆ ಕೊಟ್ಟಿಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆಸಿಲ್ಲ ಮತ್ತು ನಾನು ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಪಾಯ ಎಷ್ಟು ಅಡಿ ಅಗಲ ಮತ್ತು ಉದ್ದ ಇತ್ತು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿಗೆ ಮನೆ ಮಂಜೂರಾತಿ ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಟ್ರಾಕ್ಟರ್ ಮತ್ತು ಜೆಸಿಬಿ ವಿಚಾರದಲ್ಲಿ ಪದೇ ಪದೇ ಪೊಲೀಸ್ ಠಾಣೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ.1 ಮತ್ತು 2 ನೇ ಆರೋಪಿಗಳು ನನಗೆ ಸ್ಥಳದಲ್ಲಿ ಯಾವುದೇ ಜಾಗ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮಣ್ಣು ಹೊಡೆದಿರುವುದಿಲ್ಲ , ಆರೋಪಿಗಳು ರೂ.50 ಹೆಚ್ಚಿನ ಹಣ ಕೊಡುತ್ತೇವೆಂದು ನನ್ನನ್ನು ಕರೆಸಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ನನ್ನ ಸಹಿಯನ್ನು ಪಡೆದಿರುತ್ತಾರೆ. ನನ್ನ ಸಹಿಯನ್ನು ಪಡೆದುಕೊಂಡಿಲ್ಲ ಎಂರದೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ